CALLING ATTENTION TO A MATTER OF URGENT PUBLIC IMPORTANCE

Re. Failure of crops in Gulbarga and Bijapur Districts and providing relief to the people.

ಶ್ರೀ ಬಾಪೂಗೌಡ (ಶಹಾಪುರ).—ಗುಲ್ಬರ್ಗ ಹಾಗೂ ಬಿಜಾಪುರ ಜಿಲ್ಲೆಗಳಲ್ಲಿ ಮುಂಗಾರು ಮತ್ತು ಹಿಂಗಾರು ಬೆಳೆಗಳು ವಿಫಲಗೊಂಡಿರುವ ಹಾಗೂ ಅಲ್ಲಿನ ಜನರಿಗೆ ಜರೂರಾಗಿ ಪರಿಹಾರ ವನ್ನೊದಗಿಸುವ ವಿಚಾರದ ಬಗ್ಗೆ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನನ್ನ ಹೇಳಿಕೆ ಈ ರೀತಿ ಇದೆ.

ಕಲಬುರ್ಗಿ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಆತಿ ದೃಷ್ಟಿಯಿಂದ ಮುಂಗಾರು ಬೆಳೆಗಳು ಹಾಳಾಗಿರುವುದು ಮತ್ತು ಹಿಂಗಾರು ಬೆಳೆ ಸರಿಯಾಗಿ ಬೆಳೆದಿಲ್ಲವೆಂಬುದು ನಿಜ.

ಈ ಸಂಬ೯ದಲ್ಲಿ ಅಲ್ಲಿನ ರೆವಿನ್ಯೂ ಅಧಿಕಾರಿಗಳು ಸರಕಾರಕ್ಕೆಅಲ್ಲಿಯ ವಿದ್ಯಮಾನಗಳನ್ನು ತಿಳಿಸಿ ಸರಕಾರವು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲು ಪರವಿ ಮಾಡಿರುತ್ತಾರೆ.

ಈಗಾಗಲೆ ಸರಕಾರದವರು ಬಿಜಾಪುರ ಮತ್ತು ಕಲಬುರ್ಗಿ ಜಿಲ್ಲೆಗಳಿಗೆ ತರಾ ಹತ್ತು ಲಕ್ಷ ರೂಪಾಯಿಗಳನ್ನು ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಲು, ವಿಭಾಗ ಅಧಿಕಾರಿಗಳಿಗೆ ಕೊಟ್ಟಿದ್ದಾರೆ ಅಲ್ಲದೆ ಲೋಕೊಪಯೋಗಿ, ಅರಣ್ಯ ಇರಾಖೆ ಮತ್ತು ಭೂ ಸಾರ ಸಂರಕ್ಷಣೆ ಇರಾಖೆ ಯವರು ಆಯವ್ಯಯ ಅಂದಾಜಿನಲ್ಲಿ ಮಂಜೂರು ಆಗಿರುವ ಕೆಲಸಗಳನ್ನು ಹಾನಿಗೆ ಈಡಾಗಿರುವ ಪ್ರದೇಶಗಳಲ್ಲ ತೀವ್ರವಾಗಿ ತೆಗೆದುಕೊಳ್ಳಲು ಆದೇಶ ನೀಡಲಾಗಿದೆ.

ಬೆಳೆಗಳು ಎಲ್ಲ ಪೂರ್ತಿಯಾಗಿ ಹಾಳಾಗಿರುವುದೋ ಅಂತಹ ಪ್ರದೇಶಗಳ ಅಂದರೆ ೭೫-೭೬ನೆ ಸಾಲಿನ ಕಂದಾಯವನ್ನು ಮಾಫಿ ಮಾಡಲು ಮತ್ತು ಭಾಗಶಃ ಹಾಳಾಗಿರುವ ಪ್ರದೇಶಗಳಲ್ಲ ಕಂದಾಯ ವಸೂಲಿ ಮುಂದಕ್ಕೆ ಹಾಕಲು ರೆವಿನ್ಯೂ ಅಧಿಕಾರಿಗಳಿಗೆ ತಿಳಿಸಲಾಗಿದೆ.

ಬಿಜಾಪುರ ಜಿಲ್ಲೆಯಲ್ಲಿ ಮೇವಿನ ಅಭಾವ ಕಂಡು ಬಂದಿರುವುದರಿಂದ ತಾಲ್ಲೂಕು ಅಭಿವೃದ್ಧಿ ಮಂಡಲಿ ಮತ್ತು ಪಿಲ್ಗನ್ ಆ್ಯಂಟಿ ಫಾಮಿನ್ ಸಂಸ್ಥೆಗಳು ಇತರ ಪ್ರದೇಸಗಳಿಂದ ಮೇವನ್ನು ತಂದು ವಿತರಣೆ ಮಾಡಲು ೧ (ಒಂದು) ಲಕ್ಷ ರೂಪಾಯಿಯನ್ನು ಸಹಾ ಮಂಜೂರು ಮಾಡಲಾಗಿದೆ.

ಈ ಜಿಲ್ಲೆಗಳಿಂದ ಕೂಲಿ ಕೆಲಸ ಸಿಗದೆ ಗೋವಾ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ವಲಸೆ ಹೋಗಿರುವ ವರದಿಗಳು ಸರಕಾರಕ್ಕೆ ಬಂದಿರುವುದಿಲ್ಲ.

ನ್ಯಾಯ ಬೆಲೆ ಅಂಗಡಿಗಳ ಮೂಲಕ ಹೆಚ್ಚು ಆಹಾರ ಧಾನ್ಯಗಳನ್ನು ವಿತರಣೆ ಮಾಡಲು ಕಾರ್ಯಕ್ರಮ ಕೈಗೊಳ್ಳಲಾಗಿದೆ ಮತ್ತು ಜನವರಿ ತಿಂಗಳಿಂದ ಪ್ರತಿ ತಿಂಗಳು ಹೆಚ್ಚು ಆಹಾರ ಧಾನ್ಯಗಳನ್ನು ಈ ಎರಡು ಜಿಲ್ಲೆಗಳಿಗೆ ಸರಬರಾಜು ಮಾಡಲಾಗಿದೆ.

ಶ್ರೀ ಬಾಪೂಗೌಡ.—ಗುಲ್ಬರ್ಗ ಜಿಲ್ಲೆಯಲ್ಲಿ ಸುಮಾರು ಪ್ರತಿಯೊಂದು ಗ್ರಾಮದಿಂದ ೩೦ ಪರ್ಸೆಂಟ್ ಜನ ಊರನ್ನು ಬಿಡುತ್ತಾ ಇದ್ದಾರೆ. ಬೆಂಗಳೂರು, ಬಾಂಬೆ ಮುಂತಾದ ಪ್ರದೇಶಗಳಿಗೆ ಜನರು ವಲಸೆ ಹೋಗುತ್ತಿದ್ದಾರೆ. ಜೆಂಗಳೂರು ೨ ತಿಂಗಳಿಂದ ೧೦,೦೦೦ ಜನ ಬಂದಿದ್ದಾರೆ. ತಮ್ಮ ಹೊಟ್ಟೆಪಾಡಿಗೋಸ್ಕರ ಎಷ್ಟು ಜನ ಊರನ್ನು ಬಿಟ್ಟಿದ್ದಾರೆ ಎನ್ನುವ ಬಗ್ಗೆ ಸರ್ವೆ ಮಾಡಿಸಿ. ತಮ್ಮ ಹೇಳಿಕೆಯಲ್ಲಿ ೧೦ ಲಕ್ಷ ರೂಪಾಯಿಗಳನ್ನು ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಲು ಒದಗಿಸಲಾಗಿದೆ ಎಂದು ಹೇಳಿದ್ದೀರಿ. ಮುಂದೆ ೯ ತಿಂಗಳವರೆಗೆ ಅಂದರೆ ಖಾರೀಫ್ ಬೆಳೆ ಬರುವವರೆಗೆ ಕೆಲಸ ಇಲ್ಲ. ಅಲ್ಲಿಯವರೆಗೆ ತಾವು ಬಜೆಟ್‌ನಲ್ಲಿ ಕೊಟ್ಟಂಥ ಹಣ ಸರಿಹೋಗುತ್ತದೋ? ಮತ್ತು ಖರೀಫ್ ಬೆಳೆಯಲ್ಲಿ ಎಷ್ಟು ನಷ್ಟವಾಗಿದೆ, ರಬಿ ಬೆಳೆಯಲ್ಲಿ ಎಷ್ಟು ನಷ್ಟವಾಗಿದೆ ಎನ್ನುವುದನ್ನು ಪ್ರತ್ಯೇಕವಾಗಿ ಸರ್ವೆ ಮಾಡಿಸಬೇಕು. ಸರ್ವೆ ಮಾಡಿಸಿದರೆ ಎಷ್ಟು ನಷ್ಟವಾಗಿದೆಯೆನ್ನುವುದು ತಿಳಿಯುತ್ತದೆ. ಅದಕ್ಕೆ ಏನಾದರೂ ಧನಸಹಾಯ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೀರಾ.

ಶ್ರೀ ಎನ್. ಹುಚ್ಚಮಾಸ್ತಿಗೌಡ. ಈ ಜಿಲ್ಲೆಗಳಿಂದ ಹೊರಗಡೆ ವಲಸೆ ಹೋಗಿರತಕ್ಕವರ ಸಂಖ್ಯೆ ಗೊತ್ತಿಲ್ಲ ಎಂದು ನಾನು ಈಗಾಗಲೇ ಹೇಳಿದ್ದೇನೆ. ಕಳೆದ ತಿಂಗಳು 21,22ನೇ ತಾರೀಖುಗಳಲ್ಲಿ ರಾಯಚೂರು, ಗುಲ್ಬರ್ಗ ಜಿಲ್ಲೆಗಳಲ್ಲಿ ನಾನು ಪ್ರವಾಸಮಾಡಿ, ನಮ್ಮ ಅಧಿಕಾರಿಗಳ ಸಭೆಯನ್ನು ಕರೆದು ಹೇಳಿದ್ದೇನೆ. ಶಾಸಕರು ಕೂಡ ನನಗೆ ಅನೇಕ ಮನವಿಗಳನ್ನು ಕೊಟ್ಟಿದ್ದಾರೆ ಮತ್ತು ದಾರಿಯುದ್ದಕ್ಕೂ ಜನರು ನನಗೆ ಮನವಿಗಳನ್ನು ಕೊಟ್ಟಿದ್ದಾರೆ ಯಾವ ಯಾವ ಪ್ರದೇಶದಲ್ಲಿ ಎಷ್ಟೆಷ್ಟು ಜನರು ವಲಸೆ ಹೋಗಿದ್ದಾರೆ ಎಂಬುದನ್ನು ನೋಡಬೇಕು ಮತ್ತು ಹೆಚ್ಚು ತೊಂದರೆಯಾಗಿರತಕ್ಕ ಪ್ರದೇಶಗಳಲ್ಲಿ ಕೆಲಸಗಳನ್ನು ಪ್ರಾರಂಭ ಮಾಡಬೇಕು ಎಂದು ನಮ್ಮ ಅಧಿಕಾರಿಗಳಿಗೆ ನಾನು ತಿಳಿಸಿ ಬಂದಿದ್ದೇನೆ. ಮಾನ್ಯ ಸದಸ್ಯರು, ಈ ಪ್ರದೇಶಗಳಲ್ಲಿ ಕೈಗೊಂಡಿರತಕ್ಕ ಕೆಲಸಗಳು ಕ್ರಮವಾಗಿ ನಡೆಯಬೇಕಾದರೆ ಮುಂದಿನ ಖಾರೀಫ್ ಬೆಳೆ ಬರುವವರೆಗೆ ಬಜೆಟ್‌ನಲ್ಲಿ ಒದಗಿಸಿರತಕ್ಕ ಹಣ ಸಾಕಾಗುತ್ತದೋ ಎಂದು ಕೇಳಿದ್ದಾರೆ. ಈ ಕೆಲಸಗಳನ್ನು ಪ್ರಾರಂಭ ಮಾಡುವುದಕ್ಕೆ ಹಣ ಒದಗಿಸಬೇಕಾಗಿದೆ. ಅವಶ್ಯಕ ಎಂದು ಕಂಡುಬಂದಲ್ಲಿ ಈ ಕೆಲಸಗಳಿಗೆ ಹೆಚ್ಚು ಹಣವನ್ನು ಒಸಗಿಸಿಕೊಡುತ್ತೇನೆ ಎಂದು ನಮ್ಮ ಅಧಿಕಾರಿಗಳಿಗೆ ತಿಳಿಸಿ ಬಂದಿದ್ದೇನೆ

SRI RAJA PID NAIK.—Is it not a fact that the only remedy to give permanent relief from famine for these districts is construction of Upper Krishna Project? Will the Government consider to take up this project?

ಶ್ರೀ ಎನ್ ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಇದು ಮಾನ್ಯ ಸದಸ್ಯರಿಗೆ, ಸರ್ಕಾರಕ್ಕೆ. ಮತ್ತು ಎಲ್ಲರಿಗೂ ಗೊತ್ತಿರತಕ್ಕ ಅಂಶ. ಆದರೆ ಏಕಕಾಲದಲ್ಲಿ ಬಗೆದ ಕೆಲಸಗಳ ಜೊತೆಗೆ ಇದನ್ನು ತೆಗೆದು ಕೊಂಡು ಆಖೈರು ಮಾಡುವುದಕ್ಕೆ ತಕ್ಕ ಹಣಕಾಸಿನ ಪರಿಸ್ಥಿತಿ ಇಲ್ಲದೇ ಇರುವುದರಿಂದ, ಯಾವುದರಿಂದ ತಕ್ಷಣ ಪ್ರಯೋಜನ ಸಿಕ್ಕುತ್ತದೋ ಅಂತಹ ಕೆಲಸಗಳನ್ನು ತೆಗೆದುಕೊಂಡಿದ್ದೇನೆ ಅದಕ್ಕೂ ಕೂಡ ಸ್ವಲ್ಪ ಹಣ ಒದಗಿಸಬೇಕಾಗಿದೆ. ಆದರೆ ಪೂರಾ ಕೆಲಸ ಆಗುವುದಕ್ಕೆ ಹಣವನ್ನು ಒದಗಿಸುವುದು ಸ್ವಲ್ಪ ಕಷ್ಟವಾಗಿದೆ.

ಶ್ರೀ ಬಸಪ್ಪಗೌಡ.—ಸುರುಪುರ, ಶಹಾಪುರ, ಸಿಂಧಗಿ, ಜವರ್ಗಿ–ಈ 4 ತಾಲ್ಲೂಕುಗಳಲ್ಲಿ ಕೆನಾಲ್ ವರ್ಕ್ಸ್ ತೆಗೆದುಕೊಂಡು ಒಂದು ಕೋಟಿ ರೂಪಾಯಿ ಖರ್ಚಾಗಿದೆ. ಈಗ ಈ ಕೆಲಸ ನಿಂತು ಹೋಗಿದೆ. ಆದುದರಿಂದ ಈಗಲಾದರೂ ಸುರುಪುರ, ಜವರ್ಗಿ, ಶಹಾಪುರ, ಸಿಂಧಗಿ ಮುದ್ದೇಹಾಳ ಈ ತಾಲ್ಲೂಕಿನ ಜನರಿಗೆ ಕೆಲಸಗಳನ್ನು ಒದಗಿಸುವುದಕ್ಕೋಸ್ಕರ ಕೆನಾಲ್ ವರ್ಕ್ಸ್‌ನ್ನು ಪುನಃ ಪ್ರಾರಂಭ ಮಾಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸೆಡಚನ್. ಬ್ಯಾರೇಜ್ ಅಲ್ಲಿ ಕೆಲಸಗಳನ್ನು ತೆಗೆದುಕೊಳ್ಳಬೇಕು ಎಂದು ತಿಳಿಸಿದೆ. ಇಧರ ಜೊತೆಗೆ ಇಂಡಿ ತಾಲ್ಲೂಕಿನಲ್ಲಿ ಜಗ್‌ಜೀವನ ಬಾಗೇಪಾಡಿ ತಾಲೂಕಿನಲ್ಲಿ ಮುಗರ್ತಳ, ಮತ್ತು ಆ ದೇ ತಾಲೂಕಿನಲ್ಲಿ ಭಾಗಾನಗರ್, ಮುದ್ದೇಬಿಹಾಳ್ ತಾಲ್ಲೂಕಿನಲ್ಲಿ ಗೋಡೆ ಸೋಮನಾಥ ಈ ಕೆರೆಗಳ ಕೆಲಸಕ್ಕೆ ಬಜೆಟ್‌ನಲ್ಲಿ ಹಣ ಒದಗಿಸಿರತಕ್ಕಂಥಾದ್ದು ಈ ಕೆಲಸಗಳನ್ನು ತೆಗೆದುಕೊಳ್ಳಬೇಕು ಎಂದು ಡೆಪ್ಯುಟಿ ಕಮಿಷನರಿಗೆ ತಿಳಿಸಿದೆ. ಮಾನ್ಯ ಸದಸ್ಯರು ಅಪ್ಪರ್‌ಕೃಷ್ಣ ಕೆನಾಲ್ ವರ್ಕ್ಸ್‌ಗೆ ಈಗಾಗಲೇ ಒಂದು ಕೋಟಿ ರೂಪಾಯಿ ಖರ್ಚಾಗಿದೆ. ಇದನ್ನು ಪುನಃ ಪ್ರಾರಂಭ ಮಾಡುತ್ತೀರಾ ಎಂದು ಕೇಳಿದ್ದಾರೆ. ಆ ಕೆಲಸವನ್ನು ತೆಗೆದುಕೊಳ್ಳುವುದಕ್ಕೂ ಕೂಡ ಸರ್ಕಾರ ಪರ್ಯಾಲೋಚನೆ ಮಾಡಿ ತಿಳಿಸಬೇಕಾಗುತ್ತದೆ.

SRI RAJA PID NAIK.—May I know what relief measures have been taken in Shahapur Taluk?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಅಲ್ಲಿಗೆ ಹೋಗಿದ್ದಾಗ ಲೋಕೋಪಯೋಗಿ ಅಧಿಕಾರಿಗಳನ್ನು ಕೇಳಿ ತಿಳಿದುಕೊಂಡು ಬಂದಿದ್ದರಲ್ಲಿ, ಗುಲ್ಬರ್ಗ ಡಿಸ್ಟ್ರಿಕ್ಟ್‌ನಲ್ಲಿರತಕ್ಕ ಎರಡು ಡಿವಿಜನಲ್‌ನಲ್ಲಿ 13 ಕೆಲಸಗಳನ್ನು ಈಗಾಗಲೇ ತೆಗೆದುಕೊಂಡಿದೆ. ಇದರ ಜೊತೆಗೆ ಸ್ಯಾರಫ್ಟನ್ ವರ್ಕ್ಸ್ 28 ಕೆಲಸಗಳಿವೆ. ಈ 28 ಕೆಲಸಗಳನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶವಿರುವುದರಿಂದ್ದ ಆ ಕೆಲಸಗಳನ್ನು ತೆಗೆದುಕೊಳ್ಳಬೇಕು ಎಂದು ತಿಳಿಸಿದ್ದೇನೆ. ಇನ್ನೊಂದು ಡಿವಿಜನ್‌ನಲ್ಲಿ ಮಾರ್ಚ್

ಅಖ್ಯೆರಿನೊಳಗೆ ಪೂರ್ಣ ಮಾಡಬೇಕಾದಂಥ ಕೆಲಸಗಳನ್ನೂ ಹೇಳಿದೆ. ಇದರಜೊತೆಗೆ 19 ಮಂಜೂರಾಗಿರತಕ್ಕ ಕೆಲಸಗಳಿವೆ. ಅವುಗಳನ್ನೂ ಕೂಡ ತೆಗೆದುಕೊಳ್ಳಬೇಕು ಎಂದು ತಿಳಿಸಿದ್ದೇನೆ. ಇದರ ಜೊತೆಗೆ ಪ್ರತಿ ತಾಲ್ಲೂಕ್ಕಿನಲ್ಲಿ 50 ಕಿಲೋಮೀಟರ್ ರಸ್ತೆಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರದ ಆಜ್ಞೆಯಾಗಿದೆ. ಅದನ್ನೂ ಕೂಡ ತೆಗೆದುಕೊಳ್ಳುವುದಕ್ಕೆ ಈಗಾಗಲೇ ನಾನು ತಿಳಿಸಿ ಬಂದಿದ್ದೇನೆ.

ಶ್ರೀ ಬಾಪೂಗೌಡ.—ಸ್ವಾಮಿ, ಈಗ ಏನಾಗಿದೆ ಎಂದರೆ ಮುಂಗಾರಿ ಬೆಳೆ ನಷ್ಟವಾಗಿರುವುದು ತಮಗೆಲ್ಲಾ ಗೊತ್ತೇ ಇದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಎಷ್ಟು ಬೆಳೆ ನಷ್ಟವಾಗಿದೆ ಎಂಬುದನ್ನು ಸರ್ವೆ ಮಾಡಿಸಿ ಅವರಿಗೆ ಧನಸಹಾಯವನ್ನು ಮಾಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎನ್. ಹುಚ್ಚಮಾಸಿಗೌಡ.—ಆಣೀವಾರಿ ತಯಾರು ಮಾಡಿದ್ದೇವೆ. ಗುಲ್ಬರ್ಗ ತಾಲ್ಲೂಕಿನಲ್ಲಿರತಕ್ಕ 150 ಗ್ರಾಮಗಳಲ್ಲಿ 79 ಗ್ರಾಮಗಳಿಗೆ ರಮಿಷನ್ ಕೊಡಬೇಕೆಂದೂ, 71 ಗ್ರಾಮಗಳಿಗೆ ಸಸ್ಪೆನ್‌ಷನ್ ಮಾಡಬೇಕೆಂದೂ ತಿಳಿಸಿ ಬಂದಿದ್ದೇನೆ. ಅಳಂದ ತಾಲ್ಲೂಕಿನಲ್ಲಿರತಕ್ಕ 129 ಗ್ರಾಮಗಳಲ್ಲಿ 51 ಗ್ರಾಮಗಳಿಗೆ ರೆಮಿಷನ್ ಕೊಡುವಂತೆ 78 ಗ್ರಾಮಗಳಿಗೆ ಸಸ್ಪೆನ್‌ಷನ್ ಮಾಡುವಂತೆ, ವಿಷಾಲಪುರ ಗ್ರಾಮದಲ್ಲಿ ಇರತಕ್ಕ 90 ಗ್ರಾಮಗಳಲ್ಲಿ 90 ಕ್ಕೂ ರೆಮಿಷನ್ ಕೊಡಬೇಕೆಂದು ತಿಳಿಸಿದ್ದೇನೆ. ಜೇವರ್ಗಿಯಲ್ಲಿರತಕ್ಕ 150 ಗ್ರಾಮಗಳಲ್ಲಿ ಖಾರಿಫ್ ಬೆಳೆ ಇರತಕ್ಕ 150 ಗ್ರಾಮಗಳಿಗೂ ರೆಮಿಷನ್ ಕೊಡಬೇಕೆಂದು ತಿಳಿಸಿದ್ದೇನೆ. ಸೇಡಂನಲ್ಲಿ 112 ಗ್ರಾಮಗಳಿದ್ದು ಅದರಲ್ಲೆ 36 ಗ್ರಾಮಗಳಲ್ಲಿ ಸಸ್ಪೆನ್‌ಷನ್ ಮಾಡಬೇಕೆಂದು ತಿಳಿಸಿದ್ದೇನೆ. ಚಿತಾಪುರದಲ್ಲಿ 121 ಗ್ರಾಮಗಳ ಪೈಕಿ 69 ಗ್ರಾಮಗಳಲ್ಲಿ ಸಸ್ಪೆನ್‌ಷನ್ ಮಾಡುವಂತೆ. ಚಿಂಚೋಳಿ ಗ್ರಾಮದಲ್ಲಿ ಸಸ್ಪೆನ್ಸ್‌ನೂ ಇಲ್ಲ, ರಮಿಷನ್ನೂ ಇಲ್ಲ. ಯಾದಗಿರಿ ತಾಲ್ಲೂಕಿನಲ್ಲಿ 138 ಗ್ರಾಮಗಳ ಪೈಕಿ 138 ಗ್ರಾಮಗಳಿಗೂ ಕೂಡ ಸಸ್ಪೆನ್‌ಷನ್ಸ್ ಮಾಡಬೇಕೆಂದು ತಿಳಿಸಿದ್ದೇನೆ. ಷಹಾಪುರ ತಾಲ್ಲೂಕ್ಕಿನಲ್ಲಿ 159 ಗ್ರಾಮದಲ್ಲಿ 126 ಖಾರಿಫ್ ಗ್ರಾಮಗಳಿವೆ. ಅದರಲ್ಲಿ 2 ಗ್ರಾಮಗಳಿಗೆ ರಮಿಷನ್ 126 ಗ್ರಾಮಗಳಲ್ಲಿ ಸಸ್ಪೆನ್‌ಷನ್ ಸೋಲಾಪುರದಲ್ಲಿ 179 ಗ್ರಾಮಗಳಲ್ಲಿ ಆಪ್ಟಕ್ಕೂ ಕೂಡ ರೆಮಿಷನ್ ಕೊಡಬೇಕೆಂದು ಆಣೀವಾರಿ ಗೊತ್ತುಮಾಡಿ ಸೇಕಡ 25ಕ್ಕಿಂತ ಕಡಿಮೆ ಬೆಳೆ ಯಾವ ಗ್ರಾಮದಲಿದೆ ಅದಕ್ಕೆ ರೆಮಿಷನ್ ಕೊಡಬೇಕೆಂದೂ 25ರಿಂದ 37½ ಒಳಗಿರುವುದಕ್ಕೆ ಸಸ್‌ಪೆನ್‌ಷನ್ ಮಾಡಬೇಕೆಂದೂ ತಿಳಿಸಿದ್ದೇನೆ.

Motion to elect Members to the Senate of Karnatak University

SRI D. DEVARAJ URS— I beg to move:

'That this Assembly do proceed to elect five members to the Senate of Karnatak University according to the principle of proportional representation by means of single trasferable vote as required under Section 21 (14) of the State Universities Ordinance, 1975'

MADAM SPEAKER— Motion Moved.

I will put the motion to the vote of the House,

The question is

'That this Assembly do proceed to elect five members to the Senate of Karnatak University according to the principle